## 2

# ಧರ್ಮಭ್ರಷ್ಟತೆ: ಕಾರಣ ಹಾಗೂ ಪರಿಹಾರ

## (3:1-4:13)

ಒಂದು ಗುಂಪಿನ ಕ್ರೈಸ್ತರು ಜಾರಿ ಹೋಗಬಾರದೆಂದು ತಿಳಿಸಲು, ಇಬ್ರಿಯ ಪುಸ್ತಕವನ್ನು ಬರೆಯಲಾಗಿದೆ (ಉದಾಹರಣೆ 2:1; 6:4-6; 10:26-31). ಇಬ್ರಿಯ 3 ಮತ್ತು 4ರಲ್ಲಿ ಇಬ್ರಿಯ ಬರಹಗಾರನು ಪ್ರಮುಖ ಅಂಶವನ್ನು ತಿಳಿಸಿರುವನು. ಭ್ರಷ್ಟತೆಯ ಕುರಿತ ಪ್ರಸಂಗವನ್ನು ಬರೆದಿರುವನು. ಹೊಸ ಒಡಂಬಡಿಕೆಯ ದಿವಸಗಳಲ್ಲಿ ಕ್ರೈಸ್ತರು ಬಿದ್ದು ಹೋದಂತೆ, ಈಗಿನ ಕಾಲದಲ್ಲಿರುವ ಕ್ರೈಸ್ತರೂ ಬಿದ್ದುಹೋಗಿರುವರು. ಅವರಿಗೆ ಅಗತ್ಯವಿದ್ದ ಸಂದೇಶದ ಅಗತ್ಯತೆ ನಮಗೂ ಇದೆ ಕ್ರಿಸ್ತನನ್ನು ನಂಬಿದವರಾದ ಜನರೇ ಭ್ರಷ್ಟರಾಗಿದ್ದಂತೆ, ಈಗಲೂ ಭ್ರಷ್ಟತೆ ಉಂಟಾಗಿದೆ. ಈ ಸಮಸ್ಯೆಯ ಪರಿಹಾರ ಹೇಗೆ? ಇಬ್ರಿಯ 3 ಮತ್ತು 4ರಲ್ಲಿ ಕೆಲವು ಪರಿಹಾರಗಳನ್ನು ಸೂಚಿಸಲಾಗಿದೆ.

ಅವನು ಬರೆದ ಪ್ರಸಂಗವನ್ನು ಅಧ್ಯಯನ ಮಾಡಿ, ಅದನ್ನು ಹೇಗೆ ನಾವುಗಳು ಅಳವಡಿಸಿಕೊಳ್ಳಬಹುದು ಎಂದು ಅಭ್ಯಾಸಮಾಡೋಣ.

### ಒಂದು ಪ್ರಸಂಗ

**ಪರಿಚಯ**

ಪ್ರಸಂಗ ಚರ್ಚೆಯ ಪರಿಚಯವನ್ನು ಇಬ್ರಿಯ 3:1-6ರಲ್ಲಿ ಮುಂದುವರೆಸಲಾಗಿದೆ. ಇಲ್ಲಿ ಕೇಳುಗರಿಗೆ ಕ್ರಿಸ್ತನ ಹಾಗೂ ಮೋಶೆಯ ಹೋಲಿಕೆಯಿಂದ ಪರಿಚಯಿಸಲಾಗಿದೆ. ಮೋಶೆ ಹಾಗೂ ಕ್ರಿಸ್ತನ ನಡುವೆ ಹೋಲಿಕೆ ಮಾಡಬಹುದು ಎಂದು ತೋರಿಸಲಾಗಿದೆ. ನಂತರ ಮೋಶೆಯ ಇಸ್ರಾಯೇಲ್ಯರನ್ನು ನಡೆಸಿದಂತೆ, ಯೇಸು ಕ್ರೈಸ್ತ ಸಭೆಯನ್ನು ನಡೆಸಿದ್ದಾನೆ ಎಂದು ಹೋಲಿಸಲಾಗಿದೆ.

''ದೇವ ಪ್ರೇಷಿತನೂ ಮಹಾಯಾಜಕನೂ ಆಗಿರುವ ಯೇಸುವನ್ನು ಲಕ್ಷ್ಯವಿಟ್ಟು ಯೋಚಿಸಿರಿ'' ಎಂಬ ಪ್ರಸಂಗವನ್ನು ಆರಂಭಿಸಲಾಗಿದೆ (3:1). ಯೇಸು ದೇವಪ್ರೇರಿತನು ಆಗಿರುವದರಿಂದ, ದೇವರ ಮಾತುಗಳನ್ನು ಮನುಷ್ಯರಿಗೆ ತಲುಪಿಸುತ್ತಾನೆ. ಮಹಾಯಾಜಕನಾಗಿ ನಮಗಾಗಿ ದೇವರ ಮುಂದೆ ವಿಜ್ಞಾಪನೆ ಮಾಡುತ್ತಾನೆ.

ನಂತರದಲ್ಲಿ ಮೋಶೆಯಂತೆ ಕ್ರಿಸ್ತನು ಸಹ ನಂಬಿಗಸ್ತನಾಗಿದ್ದಾನೆ ಎಂದು ತಿಳಿಸಿದನು. ಆತನು ಮೋಶೆಗಿಂತಲೂ ಶ್ರೇಷ್ಟನಾಗಿ, ಮೋಶೆಗಿಂತಲೂ ಶ್ರೇಷ್ಟವಾದ ಮನೆಯನ್ನು ಕಟ್ಟಿದ್ದಾನೆ (3:2, 3). ಮೋಶೆಯು ನಂಬಿಗಸ್ತನಾದ ಸೇವಕನಾದರೆ, ಕ್ರಿಸ್ತನು ದೇವರ ಮನೆಯ ಮೇಲೆ ನಂಬಿಗಸ್ತನಾಗಿದ್ದಾನೆ (3:5, 6ಎ).

ಈ ದಿನ ನಾವುಗಳು ದೇವರ ಮನೆಯಾಗಿದ್ದೇವೆ (3:6ಬಿ). ಇಸ್ರಾಯೇಲ್ಯರು ಸಹ ದೇವರ ಮನೆಯೇ ಆಗಿದ್ದರು. ಆದ್ದರಿಂದ ಇಸ್ರಾಯೇಲ್ಯರ ಪರಿಸ್ಥಿತಿಯು ನಮಗೆ ಅನುಕೂಲಕರವಾಗಿದೆ.

**ವಾಕ್ಯಭಾಗ**

ನಂತರ, ಕೀರ್ತನೆ 95:7-11 ರ ವಾಕ್ಯಭಾಗವನ್ನು ಪ್ರಸಂಗಿಸಲಾಗಿದೆ (ಇಬ್ರಿಯ 3:7-11).

**ಉದ್ದೇಶದ ವಾಕ್ಯ**

ಬರಹಗಾರನು ಈ ವಾಕ್ಯ ಭಾಗದಿಂದ, ಉದ್ದೇಶಿತ ವ್ಯಾಖ್ಯಾನ ಅಥವಾ ತನ್ನ ಪ್ರಬಂಧವನ್ನು ಮುಂದುವರೆಸಿರುವನು (ಇಬ್ರಿಯ 3:12-14). ಈ ಕೆಲವು ಪದಗಳ ಮೂಲಕ ತನ್ನ ಓದುಗರು ಮಾಡಬೇಕಾದ ಸಂಗತಿಗಳನ್ನು ವಿವರಿಸಿರುವನು. ವಚನ 13 ಈ ವಚನದ ಪ್ರತಿ ವಾಖ್ಯವು ಪ್ರಮುಖವಾಗಿದೆ.

"ಪ್ರೋತ್ಸಾಹಿಸಿರಿ": ನಾವು ಮಾಡಬೇಕಾದ ವಿಚಾರದಲ್ಲಿ ಆನಂದವಾಗಿದ್ದರಬೇಕೆಂದು ಪ್ರೋತ್ಸಾಹಿಸಲಾಗಿದೆ. ನಂಬಿಗಸ್ತರಾಗಿ ಉಳಿಯಲು ನಮ್ಮೆಲ್ಲರಿಗೆ ಈ ವಿಧಧ ಪ್ರೋತ್ಸಾಹದ ಅಗತ್ಯವಿದೆ.

"ಒಬ್ಬರನ್ನೊಬ್ಬರು": ಕ್ರೈಸ್ತತ್ವವು ಒಬ್ಬರನ್ನೊಬ್ಬರು ಒಳಗೊಂಡಿರುವ ಸಮುದಾಯ ವಾಗಿದೆ. ನಾವು ನಂಬಿಗಸ್ತರಾಗಿರುವಂತೆ, ಪರಸ್ಪರರೂ ನಂಬಿಗಸ್ತರಾಗಿರಲು ಉತ್ತೇಜನ ಪಡಿಸಬೇಕು.

"ಪ್ರತಿನಿತ್ಯವೂ"[1] ವಾರಕೊಂದಾವರ್ತಿ, ಅನ್ಯೋನ್ಯತೆಗೆ ಸೇರಿ ಬರುವಾಗ ಮಾತ್ರ ಉತ್ತೇಜಿಸದೆ ಪ್ರತಿನಿತ್ಯವೂ ಉತ್ತೇಜಿಸಬೇಕು. ಕ್ರೈಸ್ತತ್ವವು "ಒಂದಾಗಿರುವ" ಧರ್ಮವಾಗಿದೆ; ಪ್ರತಿನಿತ್ಯದ ಅನ್ಯೋನ್ಯತೆಯಲ್ಲಿರಬೇಕು.

"ಒಬ್ಬರಾದರು": ಯಾರೂ ಸಹ ಬೀಳದಂತೆ ನೋಡಿಕೊಳ್ಳಬೇಕು.

"ಕಠಿಣರಾಗಬಾರದು": ಪಾಪದಲ್ಲಿ ಮುಂದುವರೆದರೆ ಕಠಿಣರಾಗುವರು. ಆದ್ದರಿಂದ ಪ್ರತಿದಿನ, ಉತ್ತೇಜನವನ್ನು ಹಾಗೂ ಎಚ್ಚರಿಕೆಯನ್ನು ಪಡೆಯಬೇಕು.

"ಮೋಸಹೋಗಬಾರದು": ಇದು ಪಾಪದ ಸ್ವಭಾವದ ರೂಪವನ್ನು ತಿಳಿಸುತ್ತದೆ. ಪಾಪವು ವಾಗ್ದಾನವನ್ನು ನೀಡಿದರೂ, ಅದು ಮೋಸಕರವಾದದ್ದೇ. ಅದು ಮರಣವನ್ನು ತರುತ್ತದೆ!

ಪ್ರತಿದಿನ ಒಬ್ಬರನ್ನೊಬ್ಬರು ಏಕೆ ಪ್ರೋತ್ಸಾಹಿಸಬೇಕು? ಏಕೆಂದರೆ, ನಾವು ದೇವರ ಮನೆಯವರಾಗಿದ್ದೇವೆ. "ಧೈರ್ಯವನ್ನು ನಮ್ಮ ನಿರೀಕ್ಷೆಯಿಂದಾಗುವ ಉತ್ಸಾಹವನ್ನು ಕಡೇತನಕ ಧೈರ್ಯವಾಗಿ ಹಿಡುಕೊಂಡರೆ, ನಾವು ದೇವರ ಮನೆಯವರು" (3:6). "ಅಂತ್ಯದವರೆಗೂ ದೃಢವಾಗಿಹಿಡುಕೊಳ್ಳುವ ಪಕ್ಷಕ್ಕೆ ಕ್ರಿಸ್ತನಲ್ಲಿ ಪಾಲುಗಾರರಾಗಿದ್ದೇವೆ" (3:14). ನಮ್ಮ ಭರವಸವನ್ನು ದೃಢವಾಗಿ ಹಿಡಿಯದೇ ಹೋದರೆ, "ನಾವು ಬಿದ್ದು ಹೋಗು ತ್ತೇವೆ. ಆದ್ದರಿಂದ ನಾವು ಒಬ್ಬರಿಗೊಬ್ಬರು ಪ್ರೋತ್ಸಾಹಿಸಬೇಕು."

**ಪ್ರಸಂಗದ ಮುಖ್ಯಾಂಶ**

ಉದ್ದೇಶಿತ ವಾಕ್ಯದ ನಂತರ, ಪ್ರಸಂಗದ ಮುಖ್ಯಾಂಶವನ್ನು ನೋಡುತ್ತೇವೆ. ಇದರಲ್ಲಿ ಬರಹಗಾರನು ಎರಡು ವಿಭಾಗಗಳನ್ನು ಮಾಡಿರುವನು. ಮೊದಲನೆಯದಾಗಿ ಇಸ್ರಾಯೇಲ್ಯರ ಭ್ರಷ್ಟತೆಯ ಕುರಿತು ತಿಳಿಸಿರುವನು. ಆ ಉದಾಹರಣೆಯನ್ನು ತನ್ನ ಓದುಗರು ಅನುಸರಿಸದಂತೆ ಎಚ್ಚರಿಸಿದನು.

*ಭ್ರಷ್ಟತೆಯಲ್ಲಿ ಇಸ್ರಾಯೇಲ್ಯರು ನಿದರ್ಶನವಾಗಿದ್ದರು* (3:15-19). "ಹಿರಿಯರು ದೇವರಿಗೆ ಕೋಪವನ್ನೆಬ್ಬಿಸಿದರು" (3:15). ದೇವರನ್ನು ಕೋಪಪಡಿಸಿದ ಈ ಜನರೇ ಐಗುಪ್ತದಿಂದ ಹೊರಬಂದವರು. ಅದರ ಪರಿಣಾಮವಾಗಿ, (ಅವರು ವಾಗ್ದಾನ ದೇಶವನ್ನು ಸೇರದೆ ಅಡವಿಯಲ್ಲಿಯೇ ನಾಶವಾದರು; ವಚನ 11). ಅವರ ಅವಿಧೇಯತೆಯ ದೆಸೆಯಿಂದ "ಆತನ ವಿಶ್ರಾಂತಿಯನ್ನು ಸೇರದಾದರು" (3:16-19). ಅವರ ಪಾಪದ ನಿಮಿತ್ತ ಸಂಪೂರ್ಣ ಜನಾಂಗವೇ ಅಡವಿಯಲ್ಲಿ ನಾಶವಾಯಿತು.

*ವಾಕ್ಯಭಾಗದ ಅಳವಡಿಕೆ* (4:1-11). ಅಧ್ಯಾಯ 4ರ ಮುಂದಿನ ವಾಕ್ಯಭಾಗವನ್ನು, ತನ್ನ ಓದುಗರ ಅನುಸರಣೆಗೆ ನೀಡಲಾಗಿದೆ. ಇಲ್ಲಿ ವಿಶ್ರಾಂತಿಯನ್ನು ಸೇರುವ ವಾಗ್ದಾನವನ್ನು ತಿಳಿಸಲಾಗಿದೆ. ನಮ್ಮ ಹಾಗೆಯೇ, ಇಸ್ರಾಯೇಲ್ಯರಿಗೂ ಶುಭ ಸಂದೇಶ

ವನ್ನು ಸಾರಲಾಯಿತು. ಅವರ ಅಪನಂಬಿಕೆಯ ನಿಮಿತ್ತ ಈ ವಾಗ್ದಾನವನ್ನು ಅವರುಗಳು ಪಡೆಯಲಾಗಲಿಲ್ಲ (4:2).

ಇಸ್ರಾಯೇಲ್ಯರು ಈ ವಿಶ್ರಾಂತಿಯಲ್ಲಿ ಸೇರದೆ ಹೋದರೂ, "ವಿಶ್ರಾಂತಿಯ ಕುರಿತ ವಾಗ್ದನವು" ನೆರವೇರಲೇ ಬೇಕು. ಕೀರ್ತನೆ 95ರಲ್ಲಿ, ಸೃಷ್ಟಿಯಲ್ಲಿಯೇ ಆರಂಭವಾದ ವಿಶ್ರಾಂತಿಯ ಬಗ್ಗೆ ತಿಳಿಸಿ (4:3, 4), ದಾವೀದನ ಸಂಗಡ ದೇವರು ಮಾತನಾಡುವವರೆಗೆ ಅದು ಪ್ರಚಲಿತವಾಗಿತ್ತು (ಇಬ್ರಿಯ 4:5). ಮೋಶೆಯ ಹಾಗೂ ಯೆಹೋಶುವನು ಜೀವಿಸಿದ ನಾನೂರು ವರ್ಷಗಳ ನಂತರದಲ್ಲಿ ದಾವೀದನು ಜೀವಿಸಿದ್ದರೂ, ಯೇಸು ಜೀವಿಸಿದ್ದ ಸಾವಿರ ವರ್ಷಗಳ ಹಿಂದೆಯೇ, ಕೆಲವರು ಆ ವಿಶ್ರಾಂತಿಯನ್ನು ಸೇರುವದಿಲ್ಲ ಎಂಬ ಮಾತನ್ನು ಹೇಳಲಾಗಿತ್ತು. ದೇವರ ವಾಗ್ದಾನವು ಇನ್ನೂ ಪ್ರಚಲಿತವಾಗಿದೆ ಎಂಬ ಪ್ರವಾದನೆಯು ಇದಾಗಿತ್ತು, (ಯಾಕೆಂದರೆ ಇಸ್ರಾಯೇಲ್ಯರಿಗೆ ಅನುಭವವಾಗಿರಲಿಲ್ಲ; 4:8). ಈ ಮಾತಿನಲ್ಲಿ ದಾವೀದನು "ಈ ದಿನ" ಎಂಬ ವರ್ತಮಾನ ಪದದ ವ್ಯಾಖ್ಯಾನ ಮಾಡಿರುವನು (ಕೀರ್ತನೆ 95:7, 8). "ಈ ಹೊತ್ತು ದೇವರ ಶಬ್ದಕ್ಕೆ ಕಿವಿಗೊಟ್ಟರೆ ನಿಮ್ಮ ಹೃದಯಗಳನ್ನು ಕಠಿಣಮಾಡಿಕೊಳ್ಳಬೇಡಿರಿ" ಇಬ್ರಿಯ 4:1-10 ರ ಬರಹಗಾರನ ಮುಖ್ಯ ತಾತ್ಪರ್ಯ ವೇನೆಂದರೆ, ಇಸ್ರಾಯೇಲ್ಯರು ಯಾವುದರಲ್ಲಿ ಅಸಮರ್ಥರಾದರೂ, ಅದನ್ನು ನಾವುಗಳು ಮಾಡದಂಥ ಅವಕಾಶವನ್ನು ಹೊಂದಿದ್ದೇವೆ: ಹೌದು, ನಾವು ದೇವರ ವಿಶ್ರಾಂತಿಯನ್ನು ಸೇರಬಹುದು!

ವಿಶ್ರಾಂತಿ ಎಂದರೇನು? "ಅದು ಸಬ್ಬತ್ತೆಂಬ ವಿಶ್ರಾಂತಿಯಾಗಿದೆ" (4:9), ಆದರೆ ಅದು ಸಬ್ಬತ್ ದಿನವಲ್ಲ. ಹಾಗೂ ನಾವು ಪರಲೋಕಕ್ಕೆ ಹೋಗುವಾಗ ಆತನು ವಿಶ್ರಾಂತಿ ಪಡೆದಂತೆ, ನಾವುಗಳು ಸಹ ವಿಶ್ರಾಂತಿ ಪಡೆಯುತ್ತೇವೆ (4:10; ಪ್ರಕಟನೆ 14:13).

ಹೇಗೂ, ಇಸ್ರಾಯೇಲ್ಯರು ಆ ವಿಶ್ರಾಂತಿಯನ್ನು ಸೇರಲು ಅಸಮರ್ಥರಾದಂತೆ, ಕ್ರಿಸ್ತನ ಅನುಯಾಯಿಗಳು ಸಹ ಅಸಮರ್ಥರಾಗುವ ಸಾಧ್ಯತೆಯಿದೆ. ಆದ್ದರಿಂದ ಕ್ರೈಸ್ತರಿಗೆ ಈಗ ದೇವರ ಎಚ್ಚರಿಕೆಯ ಮಾತುಗಳು ಬೇಕಾಗಿವೆ: "ನಿಮ್ಮ ಹೃದಯಗಳನ್ನು ಕಠಿನಮಾಡಿಕೊಳ್ಳ ಬೇಡಿರಿ." ಈ ಬರಹಗಾರರು ಈ ಸಹೋದರರನ್ನು ಇಬ್ರಿಯ 4:11ರಲ್ಲಿ ಏನೆಂದು ಎಚ್ಚರಿಸಿದರೋ ಅದನ್ನು ನಾವು ಸಹ ಮಾಡಬೇಕಾಗಿರುವವು: "ಆದ್ದರಿಂದ ನಾವು ಆ ವಿಶ್ರಾಂತಿಯಲ್ಲಿ ಸೇರುವದಕ್ಕೆ ಪ್ರಯಾಸಪಡೋಣ; ನಮ್ಮಲ್ಲಿ ಒಬ್ಬರಾದರೂ ಅವರ ಅವಿಧೇಯತ್ವವನ್ನು ಅನುಸರಿಸುವವರಾಗಬಾರದು."[2]

## ಮುಕ್ತಾಯ

ಪ್ರಸಂಗವು ಎಚ್ಚರಿಕೆಯ ಹಾಗೂ ಉತ್ತೇಜನದ ಪದಗಳಿಂದ ಸಮಾಪ್ತಿಗೊಳ್ಳುತ್ತದೆ (4:11-13). ಆ ವಿಶ್ರಾಂತಿಯಲ್ಲಿ ಸೇರುವದಕ್ಕೆ ಪ್ರಯಾಸಪಡೋಣ. ಪರಲೋಕದಲ್ಲಿರುವ ಕ್ರೈಸ್ತರ ವಿಶ್ರಾಂತಿಗೆ ಎರಡು ವಿಧವಾದ ಉತ್ತೇಜನದ ವಾಕ್ಯವನ್ನು ನೀಡಲಾಗಿದೆ. ಆ ವಿಶ್ರಾಂತಿಗಾಗಿ ನಾವು ಪ್ರಯಾಸಪಡಬಹುದು ಏಕೆಂದರೆ, ದೇವರ ವಾಕ್ಯ ಸಜೀವವಾದದ್ದು ಹಾಗೂ ಕಾರ್ಯಸಾಧಕವಾದದ್ದು. ಇಬ್ಬಾಯಿ, ಕತ್ತಿಗಿಂತಲೂ ಹದವಾಗಿದ್ದು ಮನುಷ್ಯರ ಹೃದಯಗಳನ್ನು ಚುಚ್ಚುವಂಥದ್ದು ಆಗಿದೆ (4:12, 13). ಈ ಸತ್ಯವೇದ ವಾಕ್ಯಗಳು ಯಾವಾಗಲೂ ಸತ್ಯವಾದದ್ದೇ, ಈ ದಿನವೂ ಸಹ ಅದು ದೇವ ವಾಕ್ಯವೇ ಆಗಿದೆ. 3ನೇ ಅಧ್ಯಾಯದಲ್ಲಿ ದಾವೀದನ ಉಲ್ಲೇಖವು ಪರಿಪೂರ್ಣವಾಗಿರುವದರಿಂದ, ಅದನ್ನು ಅವಲಂಭಿಸಬಹುದು. ಮೊದಲ ಶತಮಾನದ ಕ್ರೈಸ್ತರು ಅವರು ಆ ವಿಶ್ರಾಂತಿಗಾಗಿ ಪ್ರಯಾಸಪಡದಿದ್ದರೆ, ಇಸ್ರಾಯೇಲ್ಯರಂತೆ ಶಾಪಕ್ಕೆ ತುತ್ತಾಗುವ ಸಾಧ್ಯತೆಗಳಿತ್ತು.

## ಜೀವಿತಕ್ಕೆ ಅಳವಡಿಸಿಕೊಳ್ಳುವದು

ನಮ್ಮ ಜೀವಿತಕ್ಕೆ, ಈ ಪ್ರಸಂಗವನ್ನು ಹೇಗೆ ಅಳವಡಿಸಿಕೊಳ್ಳಬಹುದು? ಈ ಕೆಳಗೆ

ನೀಡಲಾಗಿರುವ ಮೂರು ಅಂಶಗಳನ್ನು ಅನುಸರಿಸಿ, ಕಲಿಯಲು ಸಾಧ್ಯವಿದೆ:

*ಭ್ರಷ್ಟತೆಯ ಸಾಧ್ಯತೆಗಳು.* ಹಲವರ ಅಭಿಪ್ರಾಯಗಳಿಗೆ ಭಿನ್ನವಾಗಿ, ಭ್ರಷ್ಟತೆಗೆ ಒಳಗಾಗುವ ಸಾಧ್ಯತೆಗಳಿವೆ. ಪರಲೋಕವನ್ನೆ ಕಳಕೊಳ್ಳುವಂತ ಪಾಪಗಳನ್ನು ಕ್ರೈಸ್ತರು ಮಾಡಲು ಸಾಧ್ಯವಿದೆ. ಇಬ್ರಿಯ ಪುಸ್ತಕವು ಇದನ್ನು ಸ್ಪಷ್ಟಪಡಿಸುತ್ತದೆ. ಕ್ರೈಸ್ತರಿಗೆ, ರಕ್ಷಣೆಯು ಕೆಲವು ನಿಯಮಗಳಿರುತ್ತವೆ. ಅರಣ್ಯದಲ್ಲಿ ಬಿದ್ದು ಹೋದ ಇಸ್ರಾಯೇಲ್ಯರಲ್ಲಿ ಆ ಸಂಗತಿಗಳು ಉದಹರಿಸಲಾಗಿದ್ದವು.

*ಭ್ರಷ್ಟತೆಗೆ ಕಾರಣ.* ಅಪನಂಬಿಕೆಯ ನಿಮಿತ್ತ ಅವರು ಭ್ರಷ್ಟರಾದರು. ಇಸ್ರಾಯೇಲ್ಯರ ಭ್ರಷ್ಟತೆಯ ಕುರಿತು ವಿಧವಿಧವಾಗಿ ವಿವರಿಸಲಾಗಿದೆ: ಅವರು ಕಠಿಣ ಹೃದಯಗಳಾಗಿ ದೇವರಿಗೆ ಕೋಪವೆಬ್ಬಿಸಿದರು (3:8); ಅವರು ಹೃದಯದಲ್ಲಿ ಯಾವಾಗಲೂ ತಪ್ಪಿಹೋಗು ವವರು (3:10); ಅವರು ಪಾಪಮಾಡಿದರು (3:17); ಅವಿಧೇಯರಾದರು (3:18; 4:6). ಅಪನಂಬಿಕೆಯೇ ಅವರ ಪ್ರಾಥಮಿಕ ಸಮಸ್ಯೆಯಾಗಿತ್ತು. ಅವಿಧೇಯತೆಯ ದೆಸೆಯಿಂದ ಅವರು ದೇವರ ವಿಶ್ರಾಂತಿಯಲ್ಲಿ ಸೇರದಾದರು (3:19; ನೋಡಿರಿ 3:12, 4:2). ಅವರ ಚರಿತ್ರೆಯನ್ನು ನೆನಪು ಮಾಡಿರಿ. ಅವರು ಕೆಂಪು ಸಮುದ್ರದ ಬಳಿ ಬರುವಾಗ ಗುಣಗುಟ್ಟಿದರು ನೀರಿಗಾಗಿ, ಆಹಾರಕ್ಕಾಗಿ ದೂರಿದರು, ಭಯಪಟ್ಟದ್ದರಿಂದ ಅವರು ಕಾನಾನ್ ದೇಶವನ್ನು ಪ್ರವೇಶಿಸಲಿಲ್ಲ. ನಂಬಿಕೆಯಿಲ್ಲದ್ದರಿಂದ ಸಕಲ ವಿಷಯಗ ಳಲ್ಲೂ ಸೋತುಹೋದರು! ಅವಿಧೇಯತೆಯ ದೆಸೆಯಿಂದ ಸೋತರು, ಅದಕ್ಕೆ ಕಾರಣ ಅಪನಂಬಿಕೆಯೇ.

ನಮ್ಮ ವಿಷಯದಲ್ಲೂ ಇದು ಸತ್ಯಾಂಶವಾಗಿರುತ್ತದೆ: ದೇವರ ಸಹಾಯವನ್ನು ಪಡೆಯದೆ ನಮ್ಮ ಗುರಿಯನ್ನು ಸಾಧಿಸಲು ಪ್ರಯತ್ನಿಸುತ್ತಿರಬಹುದು. ದೇವರ ಮಾತುಗಳಲ್ಲಿ ಸಂದೇಹವಿರಬಹುದು. ದೇವರ ಕಾರ್ಯಗಳನ್ನು ಈಡೇರಿಸಲು ನಮ್ಮ ಅವಿಧೇಯತೆಯ ಅಡಿಯಾಗಿರಬಹುದು. ಅವಿಧೇಯತೆಯು ಭ್ರಷ್ಟತೆಗೆ ಕಾರಣವಾಗಿದೆ.

*ಭ್ರಷ್ಟತೆಯ ತಡೆಗಟ್ಟುವಿಕೆ:* ಈ ವಾಕ್ಯಭಾಗದಲ್ಲಿ ಭ್ರಷ್ಟತೆಯನ್ನು ತಡೆಗಟ್ಟಬಹದು ಎಂದು ತಿಳಿಸಲಾಗಿದೆ: ಮೂರು ನಿಯಮಗಳನ್ನು ಪಾಲಿಸುವದರಿಂದ, ಬೀಳದಂತೆ ಎಚ್ಚರವಾಗಿರ ಬಹುದು: (1) "ಭಯಬೀತರಾಗಿರಬೇಕು ..." (4:1). ಭ್ರಷ್ಟತೆಯ ಪರಿಣಾಮಗಳನ್ನು ಅರಿತು ಭಯಪಡುವವರಾಗಿರಬೇಕು. (2) "ಪ್ರಯಾಸ ಪಡುವವರಾಗಿರಬೇಕು ..." (4:11). ನಂಬಿಗಸ್ತರಾಗಲು ಪ್ರಯತ್ನಿಸುವದರಿಂದ, ಬೀಳದಂತೆ ಇರಬಹುದು. (3) "ಒಬ್ಬರಿಗೊಬ್ಬರು ಪ್ರೋತ್ಸಾಹಿಸಿರಿ ..." (3:13). ಬೀಳದಂತೆ ಇರಲು ಒಬ್ಬರನ್ನೊಬ್ಬರು ಪ್ರೋತ್ಸಾಹಿಸಿ, ಕರ್ತನಲ್ಲಿ ನಂಬಿಗಸ್ತರಾಗಿರಬೇಕು. *ಪುನಃ ಬೀಳದಂತೆ ಎಚ್ಚರವಾಗಿರಲು ಮೂರು ಅಂಶಗಳನ್ನು ಪಾಲಿಸಬೇಕು: (1) ಭ್ರಷ್ಟತೆಯ ಬಗ್ಗೆ ಎಚ್ಚರವಹಿಸಬೇಕು, (2) ವೈಯಕ್ತಿಕ ಪ್ರಯಾಸ, ಮತ್ತು (3) ಪರಸ್ಪರ ಎಚ್ಚರಿಕೆ.*

## ಮುಕ್ತಾಯ

ಇಬ್ರಿಯ ಬರಹದ ಓದುಗರಲ್ಲಿ ಕೆಲವರು ಸೋತುಹೋದಂತೆ, ನಾವುಗಳು ಇರುವದಾದರೆ, ಈ ಒಂದು ಅಂಶವನ್ನು ನಾವು ಅರಿಯಬೇಕು: ನೀವು ಹಿಂದಿರುಗಲಾರದಂತ ಅಂತರದಲ್ಲಿ ಬಿದ್ದಿರುವದಿಲ್ಲ, ಮಾನಸಾಂತರ ಪಡುವದಾದರೆ, ನಿಮ್ಮನ್ನು ದೇವರು ತನ್ನ ಹತ್ತಿರಕ್ಕೆ ಸೆಳಕೊಳ್ಳುವನು - ಅದಕ್ಕೆ ಅಂತರದ ಅಡ್ಡಿ ಇರುವದಿಲ್ಲ! ಪಾಪುಗಳಿಗಾಗಿ ಮಾನಸಾಂತರ ಪಟ್ಟು, (ಅಪೊಸ್ತಲರ ಕೃತ್ಯಗಳು 8:22), ಪಾಪಗಳನ್ನು ಅರಿಕೆಮಾಡಿ (ಅಪೊಸ್ತಲರ ಕೃತ್ಯಗಳು 8:22; ನೋಡಿರಿ 1 ಯೋಹಾನ 1:9). ಪಾಪ ಕ್ಷಮೆಗಾಗಿ ಪ್ರಾರ್ಥಿಸಿದರೆ, ದೇವರ ಬಳಿಗೆ ಹಿಂದಿರುಗಬಹುದಾಗಿದೆ. ತಪ್ಪಿಹೋದ ಮಗನು ಹಿಂದಿರುಗಿದ ಮಾದರಿಯನ್ನು ಅನುಸರಿಸಿರಿ (ಲೂಕ 15). ನಿಮ್ಮ ತಂದೆಯ ಬಳಿಗೆ ಇಂದೇ ಹೊರಟು ಬನ್ನಿರಿ.

ಟಿಪ್ಪಣಿಗಳು

[1]ದೇವರ ದೃಷ್ಟಿಯಲ್ಲಿ “ಈ ಹೊತ್ತು” ಎಂಬದೇ ಇರುತ್ತದೆ. [2]1 ಕೊರಿಂಥ 10:1-12ರಲ್ಲಿ ಇಸ್ರಾಯೇಲ್ಯರ ಭ್ರಷ್ಟತೆಯನ್ನು ಅನುಸರಿಸಬೇಡಿ ಎಂಬ ಇನ್ನೊಂದು ಉದಾಹರಣೆಯಾಗಿರುತ್ತದೆ.